## ನಾಯಿಪಾಡು

ತುಂಬಾ ದಿನಗಳ ನಂತರ ಸ್ನೇಹಿತೆಯ ಮನೆಗೆ ಹೋಗಿದ್ದೆ. ಬಾಗಿಲಿನಲ್ಲಿಯೇ ನಾಯಿಯನ್ನು ಕಟ್ಟಿದ್ದರು. ನಾನು ತುಸು ಹೆದರಿಕೆಯಿಂದ ಅಲ್ಲಿಯೇ ನಿಂತು ಸ್ನೇಹಿತೆಗೆ ಫೋನ್ ಮಾಡಿದೆ. ಅವಳು ನನ್ನನ್ನು ಕರೆತರಲು ಮಗನನ್ನು ಕಳಿಸುವುದಾಗಿ ಹೇಳಿದಳು. ಹಿಂದೆಯೇ ಅವಳ ಮಗ ಹೊರಬಂದು, 'ಧೈರ್ಯವಾಗಿ ಒಳಗಡೆ ಬನ್ನಿ ಆಂಟಿ' ಎಂದು ಕರೆದ. 'ನಾಯಿ ಕಚ್ಚೋದಿಲ್ಲವೇನೊ?' ಎಂದು ಕೇಳಿದೆ. 'ಇದು ನಮಗೂ ಹೊಸ ನಾಯಿ. ಕಚ್ಚುತ್ತೊ ಇಲ್ಲವೊ ಗೊತ್ತಿಲ್ಲ. ಅದನ್ನೇ ಈಗ ಪರೀಕ್ಷೆ ಮಾಡಬೇಕಾಗಿದೆ. ಅದಕ್ಕೇ ಧೈರ್ಯವಾಗಿ ಒಳಗೆ ಬನ್ನಿ ಅಂತ ಹೇಳಿದ್ದು' ಅಂದ. ಅವನ ಮಾತು ಕೇಳಿ ಅಲ್ಲಿಯೇ ನಿಂತು ಬಿಟ್ಟೆ.

**ಶಿವಲೀಲಾ ಸೊಪ್ಪಿಮಠ**



---



## ಪಾನ್ ವಿವರ

ಒಂದು ದಿನ ಬೆಳಗ್ಗೆ ನಮ್ಮನೆಯ ಕೆಲಸದವಳ ಗಂಡ ಮನೆಗೆ ಬಂದ. ಬ್ಯಾಂಕಿನಿಂದ ಅವನಿಗೆ ಬಂದ ಪತ್ರವನ್ನು ತಂದು ಕೊಟ್ಟು, 'ಬ್ಯಾಂಕಿನಿಂದ ಇದೇನೊ ಪತ್ರ ಬಂದೈತೆ, ಓದಿ ಹೇಳಿ' ಎಂದ. ಅವನು ಕೊಟ್ಟ ಪತ್ರ ಓದಿ, 'ನಿನ್ನ ಪಾನ್ ವಿವರ ಕೇಳಿದ್ದಾರೆ' ಎಂದು ಹೇಳಿದೆ. 'ಅಯ್ಯೊ ಅಕ್ಕಾ, ಬ್ಯಾಂಕಿನವರಿಗೆ ನನ್ನ ಬಗ್ಗೆ ಎಷ್ಟು ಕಾಳಜಿ ಅಲ್ವಾ? ಇಕಾ... ಬರ್ಕಳ್ಳಿ... ಎರಡು ಕಲ್ಕತ್ತಾ ಎಲೆ, ಮೂರು ತುಂಡು ಹಾಲಡಿಕೆ, ಒಂಚೂರು ಯಾಲಕ್ಕಿ, ಲವಂಗ, ಮತ್ತೆ ಸ್ವಲ್ಪ ಜಾಸ್ತಿ ಗುಲ್ಕಂ ಜೊತೆಗೆ ಸುಣ್ಣ ಸ್ವಲ್ಪ ಕಡಿಮೆ ಹಾಕಿದರೆ ಆಯಿತು... ಮಸ್ತ್ ಪಾನ್ ರೆಡಿ' ಎಂದು ಒಂದೇ ಉಸಿರಿಗೆ ಹೇಳಿದಾಗ ನಾನು ಅವಾಕ್ಕಾದೆ. ಪಾನ್ ಕಾರ್ಡ್ ಬಗ್ಗೆ ಅವನಿಗೆ ತಿಳಿಸಿ ಹೇಳುವಷ್ಟೊತ್ತಿಗೆ ಸುಸ್ತಾಗಿ ಹೋದೆ.

**ಜಯಮಾಲಾ ಪೈ**

ಕಲೆ: ಗಣೇಶ ಆಚಾರ್ಯ